ಕ್ರಮ ತೆಗೆದುಕೊಳ್ಳಬೇಕಾಗಿರುವಂಥದ್ದು ಸರ್ಕಾರದ ಕರ್ತವ್ಯ. ಆ ಕರ್ತವ್ಯವನ್ನು ಸರ್ಕಾರ ನಿರ್ವಹಿಸುತ್ತದೆ ಎನ್ನತಕ್ಕಂಥ ಆಶ್ವಾಸನೆಯನ್ನು ನಾನು ತಮ್ಮ ಮೂಲಕ ಸನ್ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

2. ಆರೋಗ್ಯ ಇಲಾಖೆಯ ಕಾರ್ಯದರ್ಶಿ-2 ಅವರ ಕಛೇರಿಗೆ ದುಷ್ಕರ್ಮಿಗಳು ನುಗ್ಗಿ ಹೆದರಿಸಿರುವ ಬಗ್ಗೆ

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಎರಡು ಮೂರು ದಿವಸಗಳ ಹಿಂದೆ ನಮ್ಮ ರಾಜ್ಯದ ಯಾವ ಅಧಿಕಾರಿಗಳಿದ್ದಾರೆ, ಅವರಿಗೆಲ್ಲಾ ಆತಂಕ ಬರುವಂತಹ ಒಂದು ಸಂಗತಿ ಜರುಗಿದೆ. ಆರೋಗ್ಯ ಇಲಾಖೆಯ ಕಾರ್ಯದರ್ಶಿ-2 ಅವರ ಕಛೇರಿಗೆ ಇಬ್ಬರು, ಮೂವರು ದುಷ್ಕರ್ಮಿಗಳು ನುಗ್ಗಿ ಅವರ ಇಲಾಖೆಯಲ್ಲಿ ಯಾರೋ ಒಬ್ಬರು ನರ್ಸಿಂಗ್ ಸೂಪರಿಂಟೆಂಡೆಂಟ್ ಅವರ ಕಡತ ಹಣಕಾಸು ಇಲಾಖೆಯಲ್ಲಿ ರಿಜೆಕ್ಟ್ ಆಯಿತು ಅನ್ನುವ ಕಾರಣಕ್ಕೋಸ್ಕರ ಹೆಲ್ತ್ ಸೆಕ್ರೆಟರಿ-2, ಡೆಪ್ಯುಟಿ ಸೆಕ್ರೆಟರಿ, ಅಂದರೆ ಸೆಕ್ರೆಟರಿಯವರೆಗೆ ಹೀನಾಯಮಾನವಾಗಿ ಬೈದು ಅವರ ಪ್ರಾಣಕ್ಕೆ ಅಪಾಯವನ್ನು ಒಡ್ಡಿ ಯಾರ್ಯಾರದೋ ಮಂತ್ರಿಗಳ ಹೆಸರು ಹೇಳಿ ಅವರನ್ನು ಕೂಡ ನಾವು ಹೇಗೆ ಕಂಟ್ರೋಲ್ ಮಾಡಬೇಕೆಂದು ಗೊತ್ತಿದೆ ಎಂದು ಹೇಳಿ ಹೆದರಿಸಿ ಸಿಕ್ಕಾ ಪಟ್ಟೆ ಬೈದು ಬಂದಿದ್ದಾರೆ. ಇದರಿಂದ ಇಡೀ ಆರೋಗ್ಯ ಸಚಿವಾಲಯ-ಏನು ಇದೆ ಹೆಲ್ತ್ ಸೆಕ್ರೆಟರಿ ಅವರ ಇಲಾಖೆ ಏನಿದೆ ಅಲ್ಲಿ ಅಧಿಕಾರಿಗಳು ಕೆಲಸ ಮಾಡಲಿಕ್ಕೆ ಆಗದೆ ಅವರು ಅವತ್ತು ಸ್ಟ್ರೈಕ್ ಮಾಡಬೇಕಾದಂತಹ ಒಂದು ಮೂಡಿನಲ್ಲಿ ಇದ್ದರು. ಯಾವುದೇ ಕೆಲಸ ಮಾಡುವುದಕ್ಕೆ ಆಗದೆ ಬಹಳ ಆತಂಕಪೂರಿತ ದಿನಗಳನ್ನು ಇವತ್ತು ಅವರು ಕಳೆಯುತ್ತಿದ್ದಾರೆ. ಈ ದೃಷ್ಟಿಯಿಂದ ರಾಜ್ಯ ಅಧಿಕಾರಿಗಳು ನಿರ್ಭೀತವಾದ ವಾತಾವರಣದಲ್ಲಿ ಕೆಲಸ ಮಾಡುವಂತಹ ವಾತಾವರಣ ಸೃಷ್ಟಿ ಮಾಡಬೇಕು. ಇದರಲ್ಲಿ ಹೆದರಿಸಿ ಬೆದರಿಸಿ ಆತಂಕ ಒಡ್ಡಿರುವ ಪ್ರಸಂಗ ಏನು ಜರುಗಿದೆ ಆ ದುಷ್ಕರ್ಮಿಗಳ ವಿರುದ್ಧ ಅವರು ಎಷ್ಟೇ ಉನ್ನತ ಮಟ್ಟದಲ್ಲಿದ್ದರೂ ಕೂಡ ಅವರ ವಿರುದ್ಧ ಕ್ರಮ ಜರುಗಿಸಬೇಕೆಂದು ನಾನು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಹೆದರಿಕೆ ಬೆದರಿಕೆಯಿಂದ ಕಾನೂನು ತಿರುಗಿಸುತ್ತೇವೆಂದು ಯಾರಾದರೂ ಭಾವಿಸಿದ್ದರೆ ಅದು ಸರ್ವಥಾ ಅವರ ತಪ್ಪು ಕಲ್ಪನೆ. ಆ ರೀತಿ ಆಲೋಚನೆ ಮಾಡತಕ್ಕಂಥದ್ದೇ ತಪ್ಪು. ಬೆದರಿಕೆಗೆ ಮಣಿಯುವ ಹಾಗಿದ್ದರೆ ಸರ್ಕಾರ ಏಕೆ ಇರಬೇಕು. ಸರ್ಕಾರ ತನ್ನ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಹೆದರಿಕೆ, ಬೆದರಿಕೆಗಿಂತ ಈ ಕಾನೂನು ಮುಖ್ಯ. ಕಾನೂನು ಕ್ರಮವನ್ನು ಖಂಡಿತವಾಗಿ ಈ ಘಟನೆಯಲ್ಲಿ ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನತಕ್ಕಂತಹ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ನೀಡುವುದಕ್ಕೆ ಇಷ್ಟ ಪಡುತ್ತೇನೆ.